ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 07–01–2021

# ಮಾಧ್ಯಮ ಆಮಂತ್ರಣ

1) ಕರ್ನಾಟಕ ಯೋಜನಾ ಮಂಡಳಿಯ ಪ್ರಥಮ ಸಭೆ :

ಅಧ್ಯಕ್ಷತೆ:
ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು

ಘನ ಉಪಸ್ಥಿತಿ :
ಬಿ. ಜೆ. ಪುಟ್ಟಸ್ವಾಮಿ, ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ

ದಿನಾಂಕ : 08–01–2021 ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ
ಸ್ಥಳ : 334, ಸಮ್ಮೇಳನ ಸಭಾಂಗಣ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು

ಸಭೆಯ ನಂತರ ಪತ್ರಿಕಾಗೋಷ್ಠಿ : ಸಮಯ ಮಧ್ಯಾಹ್ನ 1–10 ಗಂಟೆಗೆ

ವಿ. ಸೂ. : ಸಭೆಯ ಪ್ರಾರಂಭದ ಮೊದಲ 3 ನಿಮಿಷಗಳು ಮಾತ್ರ ಛಾಯಾಚಿತ್ರೀಕರಣ ಹಾಗೂ ವಿಡೀಯೋ ಚಿತ್ರೀಕರಣಕ್ಕೆ ಅವಕಾಶ.

## 2) ವಿಶೇಷ ಮಾಧ್ಯಮ ಆಮಂತ್ರಣ

ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶ್ರೀ ಎ. ವಿ. ಚಂದ್ರಶೇಖರ್ ಅವರು ಜನವರಿ 8 ರಂದು ಅಪರಾಹ್ನ 12–00 ಗಂಟೆಗೆ ಬೆಂಗಳೂರಿನ ಹೆಚ್ ಸಿದ್ದಯ್ಯ ರಸ್ತೆಯ ನ್ಯಾಯ ದೇಗುಲದ ಮೊದಲನೇ ಮಹಡಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಮ್ಮೇಳನ ಸಭಾಂಗಣದಲ್ಲಿ ಮಾಧ್ಯಮ ಪ್ರತಿನಿಧಿಗಳನ್ನು ಭೇಟಿ ಮಾಡಲು ಇಚ್ಛಿಸಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಚಟುವಟಿಕೆಗಳು ಹಾಗೂ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಯೋಜನೆಗಳ ಅನುಷ್ಠಾನ ಕುರಿತ ಮುಖ್ಯಾಂಶಗಳ ಬಹಿರಂಗಪಡಿಸಲಿರುವ ಭೋಜನ-ಸಹಿತ ಈ ಪತ್ರಿಕಾಗೋಷ್ಠಿಯಲ್ಲಿ ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮದ ವರದಿಗಾರರು ಹಾಗೂ ಛಾಯಾಗ್ರಾಹಕರು ಹಾಜರಾಗಲು ಕೋರಲಾಗಿದೆ.

ಡಿ. ಪಿ. ಮುರಳೀಧರ್
ಜಂಟಿ ನಿರ್ದೇಶಕರು ( ವಾರ್ತೆ )

**SPECIAL MEDIA INVITATION**

**The Retired Judge of the High Court of Karnataka Mr Justice A V Chandrashekhar has desired to meet Media Persons on January 8 at 12-00 Noon at the Conference Hall in the First Floor of NYAYA DEGULA, at Karnataka State Legal Services Authority on H Siddaiah Road in Bengaluru.**

**Media Persons, Correspondents and Camera Persons - representing both Electronic and Print Media, are requested to kindly attend this Luncheon Press Conference, at which highlights of the Implementation of the Schemes of National Legal Services Authority and Activities of the Karnataka State Legal Services Authority will be disclosed.**

**D. P. MURALIDHAR**
**JOINT DIRECTOR ( NEWS )**

3) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಗಾರ ಕುರಿತು ಮಾಹಿತಿ ಹಾಗೂ ಪತ್ರಿಕಾಗೋಷ್ಠಿ :

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ದಿನಾಂಕ: 08-01-2021 ಶುಕ್ರವಾರ ಸಮಯ : ಮಧ್ಯಾಹ್ನ 12-30 ಗಂಟೆಗೆ
ಸ್ಥಳ : ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ಬೆಂಗಳೂರು

4) ಕರ್ನಾಟಕ ಲಲಿತಕಲಾ ಅಕಾಡೆಮಿ

48ನೇ ವಾರ್ಷಿಕ ಕಲಾಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ

ಅಧ್ಯಕ್ಷತೆ :

ಮಹೇಂದ್ರ . ಡಿ. ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ

ದಿನಾಂಕ : 08–01–2021 ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಬೆಂಗಳೂರು

**5) Press Conference : Virtual Meet**

**'National Horticultural Fair' under theme "Horticulture for Start-up and Stand-up India"**

**Date : 08-01-2021 Friday 2-30 P.M.**

**Zoom Link https://zoom.us/j/99496296360**
**Meeting ID : 994 9629 6360 Passcode : 802750**

## ಪತ್ರಿಕಾ ಪ್ರಕಟಣೆ

# ಸಸ್ಯ ಆರೋಗ್ಯ ಚಿಕಿತ್ಸಾಲಯ ವಾಹನಕ್ಕೆ ಮುಖ್ಯಮಂತ್ರಿ ಚಾಲನೆ

ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ): ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 40 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ಸ್ಥಾಪಿಸಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಇಂದು ವಿಧಾನಸೌಧದ ಮುಂಭಾಗದಲ್ಲಿ 40 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ವಾಹನಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಮುಖ್ಯಮಂತ್ರಿಗಳು , ಕಾಲಕಾಲಕ್ಕೆ ಮಣ್ಣು, ಬೆಳೆಗಳಲ್ಲಿ ಕೀಟರೋಗ, ನೀರು ಪರೀಕ್ಷೆ, ಔಷಧಿ ಸಿಂಪಡಣೆ ಸೇರಿದಂತೆ ಇನ್ನಿತರ ತಾಂತ್ರಿಕ ನೆರವುಗಳನ್ನು ರೈತರ ಮನೆಬಾಗಿಲಿಗೆ ನೀಡಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ರೈತರು ತಮ್ಮ ಸಮಸ್ಯೆ ಕುರಿತು ಕೃಷಿ ಸಂಜೀವಿನ ಸಹಾಯವಾಣಿ 15531 ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಿದರೆ ರೈತರ ಹೊಲಗಳಿಗೆ ವಾಹನಗಳು ಹೋಗಿ ಮಾರ್ಗೋಪಾಯಗಳನ್ನು ಸೂಚಿಸಲಾಗುತ್ತದೆ ಎಂದ ಮುಖ್ಯಮಂತ್ರಿಗಳು, ಈ ಯೋಜನೆಯು ರೈತರಿಗೆ ಯಾವ ರೀತಿ ಸದ್ಬಳಕೆಯಾಗುತ್ತದೆ ಎಂದು ಪರಿಶೀಲಿಸಿದ ನಂತರ ಮುಂದೆ ಹೆಚ್ಚಿನ ವಾಹನ ಒದಗಿಸುವ ಕ್ರಮಕೈಗೊಳ್ಳಲಾಗುವುದು ಎಂದರು.

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ರೈತಾಪಿ ವರ್ಗಕ್ಕೆ ಅನುಕೂಲವಾಗಲಿ ಎಂದು ಈ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ರೈತ ಸ್ನೇಹಿಯಾಗಿರುವ ಈ ಪ್ರಯೋಗಾಲಯದ ಉಪಯೋಗವನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದರು

ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರು , ಕೃಷಿ ಇಲಾಖೆಯ ಆಯುಕ್ತರು ಉಪಸ್ಥಿತರಿದ್ದರು.

## ಮುಜರಾಯಿ ಇಲಾಖೆ ಪ್ರಕಟಿತ "ಗುಡಿ" ಮಾಸ ಪತ್ರಿಕೆ ಮುಖ್ಯಮಂತ್ರಿಗಳಿಂದ ಬಿಡುಗಡೆ :

ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ): ರಾಜ್ಯದ ಮುಜರಾಯಿ ಇಲಾಖೆಯಡಿ ಬರುವ ದೇವಾಲಯಗಳ ಐತಿಹಾಸಿಕ ಪರಂಪರೆ, ಇತಿಹಾಸ, ಪೂಜಾ ಪದ್ಧತಿಗಳನ್ನು ಸಾರ್ವಜನಿಕರಿಗೆ ಹಾಗೂ ಭಕ್ತಾಧಿಗಳಿಗೆ ಪರಿಚಯಿಸಲು 'ಗುಡಿ' ಮಾಸಿಕ ಪತ್ರಿಕೆ ಯನ್ನು ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಅವರು ಇಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಧಾರ್ಮಿಕ ಪರಿಷತ್ ಸದಸ್ಯರಿಗೆ ಅವರ ಕರ್ತವ್ಯದ ಕುರಿತು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟನೆ ಹಾಗೂ "ಗುಡಿ" ಧಾರ್ಮಿಕ ಮಾಸ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದರು

ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಬರುವ ಶಿಥಿಲವಾಗಿರುವ ದೇವಸ್ಥಾನಗಳ ಜೀರ್ಣೋದ್ಧಾರ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಗೂ ಮುಜರಾಯಿ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳ ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡಲಾಗುವುದು ಎಂದರು.

ಕರ್ನಾಟಕ ರಾಜ್ಯದಿಂದ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ 30 ಸಾವಿರ ರೂ. ಹಾಗೂ ಚಾರ್‌ಧಾಮ್ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ರೂ. 20 ಸಾವಿರಗಳ ಸಹಾಯಧನ ನೀಡಲಾಗುವುದು. ತಿರುಮಲ, ಮಂತ್ರಾಲಯ, ಶ್ರೀಶೈಲಂ ಮತ್ತು ಉತ್ತರ ಪ್ರದೇಶದ ವಾರಣಾಸಿಗೆ ಯಾತ್ರೆ ಕೈಗೊಳ್ಳುವ ಭಕ್ತಾಧಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದರು.

ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಬರುವ ಭಕ್ತಾದಿಗಳಿಗೆ ದೈನಂದಿನ ದಾಸೋಹ, ವಸತಿ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ. ಅಂಗವಿಕಲರಿಗೆ, ವಯೋವೃದ್ಧರಿಗೆ ಆದ್ಯತೆಯ ಮೇಲೆ ಪೂಜೆ, ಪ್ರತ್ಯೇಕ ದರ್ಶನ ವ್ಯವಸ್ಥೆಗೆ ಅವಕಾಶ ಕಲ್ಪಿಸಿದೆ. ಭಕ್ತಾಧಿಗಳಿಗೆ ಕುಡಿಯುವ ನೀರು, ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ದೇವಾಲಯಗಳ ಮೇಲ್ವಿಚಾರನೆಗಾಗಿ ಸರ್ಕಾರದಿಂದ ರಚಿಸಿರುವ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರುಗಳಿಗೆ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಇಲಾಖಾ ಆಡಳಿತದಲ್ಲಿ ಪಾರದರ್ಶಕತೆಯನ್ನು ತರಲು ಹಾಗೂ ಇಲಾಖಾ ಕಡತಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಕೈಗೊಳ್ಳಲು ಇ-ಆಫೀಸ್ ತಂತ್ರಾಂಶವನ್ನು ಇಂದಿನಿಂದ ಜಾರಿಗೆ ತರಲಾಗಿದೆ ಎಂದರು.

ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಸಚಿವ ಕೋಟಾ ಶ್ರೀನಿವಾಸಪೂಜಾರಿ ಮಾತನಾಡಿ, ಗುಡಿ ಪತ್ರಿಕೆಯಲ್ಲಿ ರಾಜ್ಯದ 34 ಸಾವಿರಕ್ಕೂ ಹೆಚ್ಚಿನ ದೇವಸ್ಥಾನಗಳ ಇತಿಹಾಸ ಕುರಿತ ಮಾಹಿತಿಯನ್ನು ರಾಜ್ಯದ ಮೂಲೆ ಮೂಲೆಗೂ ತಲುಪಬೇಕು. ಕರ್ನಾಟಕದ ಪ್ರತಿ ಧಾರ್ಮಿಕ ಕೇಂದ್ರ ಮತ್ತು ಗ್ರಂಥಾಲಯಗಳಲ್ಲಿ ಓದುಗರಿಗೆ ತಲುಪಬೇಕು ಎಂಬ ನಿಟ್ಟಿನಲ್ಲಿ ಈ ಮಾಸ ಪತ್ರಿಕೆ ಪ್ರಾರಂಭಿಸಲಾಗಿದೆ ಎಂದರು.

ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಧರ್ಮಾಧಿಕಾರಿಗಳಾದ ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆ ಅವರು ಮಾತನಾಡಿ, ಸರ್ಕಾರವು ದೇವಾಲಯಗಳಿಗೆ ಹಣ ನೀಡುತ್ತಿರುವುದರಿಂದ ದೇವಾಲಯಗಳ ಜೀರ್ಣೋದ್ದಾರ ಹಾಗೂ ಸಮುದಾಯ ಭವನದ ಚಟುವಟಿಕೆಗಳು ಪ್ರಾರಂಭವಾಗುತ್ತಿವೆ. ವಿಶೇಷ ಧಾರ್ಮಿಕ ಕ್ಷೇತ್ರವಾಗಿರುವ ನಮ್ಮ ರಾಜ್ಯದಲ್ಲಿನ ದೇವಾಲಯಗಳ ಮೂಲ ಸಾನಿಧ್ಯವನ್ನು ರಕ್ಷಣೆ ಮಾಡುವುದರ ಜೊತೆಗೆ ಶುಚಿತ್ವ ಕಾಪಾಡುವುದು ಸಹ ಸರ್ಕಾರ ಹಾಗೂ ಸಾರ್ವಜನಿಕರ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಸಂಸ್ಥಾಪಕರಾದ ಶ್ರೀ ರವಿಶಂಕರ್ ಗುರೂಜಿ, ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ ಸಂಸ್ಥಾಪರಾದ ಡಾ.ಗುರುರಾಜ್ ಕಾರ್ಜಗಿ, ಧಾರ್ಮಿಕ ಪರಿಷತ್ ಸದಸ್ಯರಾದ ಡಾ. ಮಹರ್ಷಿ ಆನಂದ ಗುರೂಜಿ ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರುಗಳು ಭಾಗವಹಿಸಿದ್ದರು.

## ಜನವರಿ 17ರಂದು ಸಹಕಾರ ಕುಕ್ಕುಟ ಮಹಾಮಂಡಳದ ಚುನಾವಣೆ

**ಬೆಂಗಳೂರು, ಜನವರಿ 7 (ಕರ್ನಾಟಕ ವಾರ್ತೆ):** ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಆಡಳಿತ ಮಂಡಳಿಯ ಚುನಾವಣೆಯನ್ನು ಜನವರಿ 17 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಮಹಾಮಂಡಳದ ಕಛೇರಿಯ ಆವರಣದಲ್ಲಿ ನಡೆಯಲಿದೆ.

ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನ ಜನವರಿ 9, ಶನಿವಾರ ಅಪರಾಹ್ನ 3 ಗಂಟೆ. ನಾಮಪತ್ರಗಳ ಪರಿಶೀಲನೆ ಜನವರಿ 10 ಬೆಳಿಗ್ಗೆ 11 ಗಂಟೆಗೆ ಮತ್ತು ನಾಪಪತ್ರ ವಾಪಸ್ ಪಡೆಯುವುದು ಜನವರಿ 11 ಮಧ್ಯಾಹ್ನ 3 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ ಮಹಾಮಂಡಳದ ಕಛೇರಿಯನ್ನು ಅಥವಾ ರಿಟರ್ನಿಂಗ್ ಅಧಿಕಾರಿಗಳನ್ನು ಸಂಪರ್ಕಿಸಬಹುದು.

## ಬಹಿರಂಗ ವಿಚಾರಣೆ

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):** ಕೆ. ಜಯಪ್ರಕಾಶ್ ಹೆಗ್ಡೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಇವರ ಅಧ್ಯಕ್ಷತೆಯಲ್ಲಿ ಆಯೋಗವು ವಿವಿಧ ಜಾತಿ/ಜನಾಂಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಹೊಸದಾಗಿ ಸೇರಿಸಲು, ಪ್ರವರ್ಗ ಬದಲಾವಣೆಗೆ, ಪರ್ಯಾಯ ಪದ ಸೇರ್ಪಡೆಗೆ ಮತ್ತು ಕಾಗುಣಿತ ದೋಷ ತಿದ್ದುಪಡಿ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ಆಯೋಗದಲ್ಲಿ ಸ್ವೀಕೃತಗೊಂಡಿರುವ ಮನವಿಗಳ ಬಹಿರಂಗ ವಿಚಾರಣೆಯನ್ನು ದಿನಾಂಕ 12-01-2021 ರಂದು ಬೆಳಿಗ್ಗೆ 11-00 ಗಂಟೆಗೆ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ, ಉಡುಪಿ ಇಲ್ಲಿ ಏರ್ಪಡಿಸಿದೆ.

ಹಿಂದುಳಿದ ವರ್ಗಗಳ ಪಟ್ಟಿಗೆ ಹೊಸದಾಗಿ ಸೇರಿಸಲು, ಪ್ರವರ್ಗ ಬದಲವಣೆಗೆ, ಪರ್ಯಾಯ ಪದ ಸೇರ್ಪಡೆಗೆ ಮತ್ತು ಕಾಗುಣಿತ ದೋಷ ತಿದ್ದುಪಡಿ ಮತ್ತು ಇತರೆ ವಿಷಯಕ್ಕೆ ಸಂಬಂಧಿಸಿದಂತೆ, ಹೊಸದಾಗಿ ಮನವಿ ಸಲ್ಲಿಸಲು ಇಚ್ಚಿಸುವ ಸಾರ್ವಜನಿಕರು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಲಿಸಬಹುದಾಗಿದೆ. ಮನವಿಗಳನ್ನು ಬಹಿರಂಗ ವಿಚಾರಣೆ ಮುಗಿದ ನಂತರ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸ್ವೀಕರಿಸಲಾಗುವುದೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## BIAL Builds State-of-the-Art Airport Halt Station, Aims to Provide Superior User Experience

**Bengaluru, January 7 (Karnataka Information)**

- ***Builds the 230-metre platform in record 45 days***
- ***Halt Station was conceptualised in line with overarching design of BLR Airport***
- ***Rail-based services will benefit logistics providers to transport Cargo to the BLR Airport efficiently***

**Bengaluru, January 07, 2021**: The much-awaited suburban train service that connects Kempegowda International Airport, Bengaluru (KIAB/ BLR Airport) was successfully launched on January 05,

2020. Users can travel between Halt Station and Airport by using the free-of-cost shuttle service that is synced with train schedules.

Among the ten stations that suburban train serves, the Kempegowda International Airport Halt Station is the only platform that was built from ground up.It is a state-of-the-art Halt Station, built by Bangalore International Airport Limited, operator of BLR Airport, with a primary focus on providing superior and hassle-free user experience. The Halt Station was conceptualised in line with overarching design of BLR Airport that includes greenery, technology, sustainability, as well as art and culture. The extensive landscaping at the Station reiterates the theme of Bengaluru as the Garden City of India.

In 2014, BIAL, in collaboration with the Railway authorities, made a proposal to Government of Karnataka to establish a suburban rail service, recommending a halt station on an existing line that runs along the north east boundary of BLR Airport.

BIAL came up with a concept and design for their Halt Station. Commencing the construction work on the Halt Station on December 06, 2019, BIAL built the 230-metre platform in record 45 days. Apart from the booking counter, concourse area, rest rooms with provision for passengers with reduced mobility, the station also has flight information display screen, well-designed granite benches and drinking water facilities. The track already existed and passed through the boundary of BLR Airport.

This is expected to gain popularity not just among air passengers and Airport employees, but also among shippers to transport Cargo to the BLR Airport efficiently. The suburban service will not just improve connectivity to and from BLR Airport but will help in reducing vehicular traffic.

## <u>ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (BIAL) ವತಿಯಿಂದ ಸರ್ವ ಸುಸಜ್ಜಿತ ಏರ್‌ಪೋರ್ಟ್ ಹಾಲ್ಟ್ ನಿಲ್ದಾಣದ ನಿರ್ಮಾಣ</u>

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):**

- ***230 ಉದ್ದದ ಪ್ಲಾಟ್‌ಫಾರ್ಮ್‌ನ್ನು ದಾಖಲೆಯ 45 ದಿನದಲ್ಲಿ ಪೂರ್ಣಗೊಳಿಸಲಾಗಿದೆ.***
- ***ಹಾಲ್ಟ್ ನಿಲ್ದಾಣವನ್ನು ಬೆಂಗಳೂರು ವಿಮಾನ ನಿಲ್ದಾಣದ ಕಟ್ಟಡದ ಮಾದರಿಯಲ್ಲಿ ನಿರ್ಮಿಸಲಾಗಿದೆ.***
- ***ಈ ರೈಲ್ವೆ ನಿಲ್ದಾಣವು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಳಸುವ ಪ್ರಯಾಣಿಕರು ಹಾಗೂ ಇತರ ಸರಕು ಸಾಮಗ್ರಿಗಳ ಪೂರೈಕೆದಾರರಿಗೂ ನೆರವಾಗುತ್ತದೆ.***

ಜನವರಿ 5, 2021 ರಂದು ಬೆಂಗಳೂರಿಗರ ಬಹುದಿನದ ಕನಸಾದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲು ಸಂಪರ್ಕವನ್ನು ಕಲ್ಪಿಸುವ ಯೋಜನೆ ಸಾಕಾರಗೊಂಡಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವು ನಿರ್ಮಿಸಿರುವ ಈ ನಿಲ್ದಾಣಕ್ಕೆ ಜನವರಿ 5, 2021 ರಿಂದ ರೈಲ್ವೆ ಇಲಾಖೆಯು ರೈಲು ಸೇವೆಗಳನ್ನು ಆರಂಭಿಸಿದೆ. BIAL ಪ್ರಾಧಿಕಾರವು ರೈಲು ಹೊರಡುವ ಹಾಗೂ ಆಗಮಿಸುವ ಸಂಧರ್ಭದಲ್ಲಿ ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣಕ್ಕೆ ಹಾಗೂ ರೈಲ್ವೆ ನಿಲ್ದಾಣದಿಂದ ವಿಮಾನ ನಿಲ್ದಾಣಕ್ಕೆ ಉಚಿತವಾಗಿ ಬಸ್ ಸೇವೆಯನ್ನು ಸಹ ಒದಗಿಸುತ್ತಿದ್ದಾರೆ.

ಈ ನಿಲ್ದಾಣವು ರೈಲು ಮಟ್ಟದ ಪ್ಲಾಟ್‌ಫಾರಂ ಅನ್ನು ಹೊಂದಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಕಟ್ಟಡದ ವಿನ್ಯಾಸ ಹಾಗೂ ಅದರ ಪರಿಸರ ಸ್ನೇಹಿ ಸುಸ್ತಿರ ತಂತ್ರಜ್ಞಾನ, ಕಲೆ, ಸಂಸ್ಕೃತಿಯ ಪಡಿಯಚ್ಚಾಗಿ ಈ ವಿಮಾನ ನಿಲ್ದಾಣವನ್ನು ನಿರ್ಮಿಸಲಾಗಿದೆ.

2014ರಲ್ಲಿ BIAL ಪ್ರಾಧಿಕಾರವು ರೈಲ್ವೆ ಇಲಾಖೆಯೊಂದಿಗೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಅಂಚಿನಲ್ಲಿ ಹಾದುಹೋಗುತ್ತಿದ್ದ ರೈಲ್ವೆ ಮಾರ್ಗದಲ್ಲಿ ಈ ನಿಲ್ದಾಣವನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಿತ್ತು. BIAL ನಿಲ್ದಾಣದ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಯೋಜನಾ ವೆಚ್ಚವನ್ನು ಸಂಪೂರ್ಣವಾಗಿ ಭರಿಸಿದ್ದಲ್ಲದೆ, ಕಾಮಗಾರಿಯನ್ನು ಸಹ ತಾನೇ ಪೂರ್ಣಗೊಳಿಸಿದೆ. ಈ ನಿಲ್ದಾಣದ ಕಾಮಗಾರಿಯನ್ನು ಡಿಸೆಂಬರ್ 6, 2019 ರಂದು ಆರಂಭಿಸಲಾಗಿದ್ದು, 230 ಉದ್ದದ ಪ್ಲಾಟ್‌ಫಾರಂನ್ನು ಕೇವಲ 45 ದಿನದಲ್ಲಿ ನಿರ್ಮಿಸಲಾಗಿದೆ. ಈ ನಿಲ್ದಾಣದಲ್ಲಿ ಬುಕ್ಕಿಂಗ್ ಕೌಂಟರ್, ಪ್ರಾಂಗಣ, ವಿಶ್ರಾಂತಿ ಕೊಠಡಿಗಳು, ವಿಮಾನ ಆಗಮನ-ನಿರ್ಗಮನ ಮಾಹಿತಿ ಪರದೆ, ಪ್ರಯಾಣಿಕರು ವಿಶ್ರಾಂತಿ ಪಡೆಯಲು ಗ್ರಾನೈಟ್ ಬೆಂಚುಗಳು, ಕುಡಿಯುವ ನೀರಿನ ಸವಲತ್ತುಗಳನ್ನು ಒದಗಿಸಲಾಗಿದೆ.

ಈ ರೈಲು ನಿಲ್ದಾಣವು ವಾಯು ಸೇವೆಯನ್ನು ಬಳಸುವ ಪ್ರಯಾಣಿಕರು ಹಾಗೂ ವಿಮಾನ ನಿಲ್ದಾಣದ ಸಿಬ್ಬಂದಿಗೆ ನೆರವಾಗುವುದರೊಂದಿಗೆ ವಿಮಾನ ನಿಲ್ದಾಣಕ್ಕೆ ಸರಕುಗಳನ್ನು ಸಾಗಿಸುವ ಉದ್ಯಮದಾರರಿಗೂ ಸಹ ನೆರವಾಗುವುದೆಂದು ಆಶಿಸಲಾಗಿದೆ. ಈ ರೈಲು ಸೇವೆಯಿಂದ ಬೆಂಗಳೂರು ನಗರ ಹಾಗೂ ವಿಮಾನ ನಿಲ್ದಾಣದ ನಡುವೆ ಸುಗಮ ಸಂಚಾರ ಸಾಕಾರಗೊಳ್ಳುವುದಲ್ಲದೆ ರಸ್ತೆ ಮೇಲಿನ ವಾಹನ ದಟ್ಟಣೆ ಕೂಡ

# ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):**

**ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾಗಿದ್ದು ರಾಜ್ಯದ ರಫ್ತು ಉತ್ತೇಜನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಈ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ 5 ದಿನಗಳ 106 ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು 18-01-2021 ರಿಂದ 22-01-2021 ರವರೆಗೆ ವರ್ಚುಯಲ್ ಪ್ಲಾಟ್‌ಫಾರ್ಮ್‌ನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.**

**ಈ ಕಾರ್ಯಕ್ರಮದಲ್ಲಿ ರಫ್ತು ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಪ್ರಮುಖವಾದ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು. ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಟಿಪಿಸಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗಾಗಿ ಸಿ.ಎಸ್. ಭಾಸ್ಕರ್, ವಿಟಿಪಿಸಿ, ಮೊಬೈಲ್ 9880958218 ಬೆಂಗಳೂರು ಇವರನ್ನು ಸಂಪರ್ಕಿಸಬಹುದು. ನಿರ್ದೇಶಕರು, (ರಫ್ತು) ಮತ್ತು ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಉತ್ತೇಜನಾ ಕೇಂದ್ರ, ಕಸ್ತೂರಬಾ ರಸ್ತೆ, ಬೆಂಗಳೂರು -560 001 ಇ ಮೇಲ್ vtpckarnataka@gmail.com ವೆಬ್‌ಸೈಟ್ www.vtpc.karnataka.gov.in**

# Export Management Training Program

**Bengaluru, January 7 (Karnataka Information)**

**Visvesvaraya Trade Promotion Centre, a Government of Karnataka Organisation for Promotion of exports in the State is organizing 5 days 106 th Export Management Training Programe from 18th 22 nd January 2021 on Virtual Platform to motivate industries/prospective entrepreneurs to enter into the fled of export and to enhance the exporter bse of the State. This above programme would cover all the salient aspects relate to exports. Interested participants may register with VTPC immediately. For further details, please contact C.S. Bhaskar, Programme Coordinator, VTPC, Bengaluru Mob 98809-58218, Director (Exports) and Managing Director, Visvesvaraya Trade Promotion Centre, Kasturaba Road, Bengaluru-1, email vtpckarnataka@gmail.com, Web.www.vtpc.karnataka.gov.in.**

# ಸಚಿವರ ಪ್ರವಾಸ

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):**

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಜನವರಿ 9 ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಸಚಿವರ ಪ್ರವಾಸ

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):**

ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ ಅವರು ಜನವರಿ 10 ರಿಂದ 13 ರವರೆಗೆ ತುಮಕೂರು, ಚಿತ್ರದುರ್ಗ, ದಾವಣಗೆರೆ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಜನವರಿ 13 ರಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**NATIONAL HORTICULTURAL FAIR - 2021**
**8th – 12th February 2021**
**HORTICULTURE : FOR START-UP & STAND-UP INDIA**

The ICAR-IIHR having developed over a period of time more than 350 technologies, many of them being eco-friendly ones, is conducting a 'National Horticultural Fair' under the theme "Horticulture for Start-up & Stand-up India" from February 8-12, 2021. The fair will have about 211 demonstration plots with IIHR varieties and technologies. This event is going to be a virtual fair with very little physical attendance. We have made a website for this purpose so that all stakeholder organizations engaged in horticultural farming would get an idea about the fair.

We request all the media persons to give wide publicity to this event so that as many as stakeholders as possible can derive benefit out of this. We invite you to participate in this 'Press Meet', programme is given herein below:

**PROGRAMME**

**Date: 08/01/2021 (2.30 pm)** **Venue: Virtual Meet**

| | | |
|---|---|---|
| 1 | Introduction & Welcome | Dr. B. Narayanaswamy<br>Principal Scientist & Nodal Officer, Media |
| 2 | About the Event | Dr. M.V. Dhananjaya, Principal Scientist & Organising Secretary, NHF |
| 3 | Launching of NHF-2021Website | Dr. M.R. Dinesh, Director, ICAR-IIHR & Chairman, NHF |

| | | |
|---|---|---|
| 4 | Interface with media | Participants |
| 5 | Vote of thanks | Dr. Sridhar Gutam |

**Zoom link : https://zoom.us/j/99496296360**
**Meeting ID: 994 9629 6360**
**Passcode: 802750**

## ಪಶ್ಚಿಮ ಘಟ್ಟಗಳಲ್ಲಿ ಏಕಜಾತಿ ನೆಡುತೋಪು ಬೆಳಸಲು ಅವಕಾಶ ನೀಡಬಾರದು: ಅಶೀಸರ

**ಬೆಂಗಳೂರು, ಜನವರಿ 07 (ಕರ್ನಾಟಕ ವಾರ್ತೆ):**

**"ಶಿವಮೊಗ್ಗ ಜಿಲ್ಲೆಯ ಸಾಗರ, ತೀರ್ಥಹಳ್ಳಿ, ಹೊಸನಗರ, ಸೊರಬ ತಾಲ್ಲೂಕುಗಳು, ಪಶ್ಚಿಮಘಟ್ಟದ ಭಾಗವಾಗಿದ್ದು ಈ ಪ್ರದೇಶದಲ್ಲಿ ಏಕಜಾತಿ ನೆಡುತೋಪು ಬೆಳೆಸಲು ಅವಕಾಶ ನೀಡಬಾರದು" ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮುಖ್ಯಮಂತ್ರಿ ಬಿ.ಎಸ್‌ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದಾರೆ.**

ಹಲವು ಸಂಘಟನೆಗಳ ಮನವಿಃ ವೃಕ್ಷಲಕ್ಷ ಆಂದೋಲನ ಸೇರಿದಂತೆ ಹಲವಾರು ಪರಿಸರ ಸಂಘಟನೆಗಳು ಶಿವಮೊಗ್ಗ ಮಲೆನಾಡು ಭಾಗದಲ್ಲಿ ಅಕೇಶಿಯಾ, ನೀಲಗಿರಿ ನೆಡುತೋಪು ನಿರ್ಮಾಣಕ್ಕೆಬಿಡಬೇಕು ಎಂದು ಚಳುವಳಿ ನಡೆಸಿವೆ. ಪರಿಸರ ಸಂಘಟನೆಗಳು ಸರ್ಕಾರಕ್ಕೆ ಜೀವವೈವಿಧ್ಯ ಮಂಡಳಿಗೆ ಪತ್ರ, ಮನವಿ ಸಲ್ಲಿಸಿವೆ. ರೈತ-ಕಿಸಾನ್ ಸಂಘಗಳು, ಸ್ಥಳೀಯ ತಾಲ್ಲೂಕು ಪಂಚಾಯತ್, ಜನ ಪ್ರತಿನಿಧಿಗಳು, ಅಕೇಶಿಯಾ ನೆಡುತೋಪು ನಿರ್ಮಾಣ ಮಲೆನಾಡಿನಲ್ಲಿ ಬೇಡ ಎಂದೇ ಆಗ್ರಹ ಮಾಡಿದ್ದಾರೆ.

**ವಿಜ್ಞಾನಿಗಳ ಸಲಹೆಃ**

ಇದರಿಂದ ಜೀವವೈವಿಧ್ಯತೆ ನಾಶ, ಭೂಮಿಯ ಮೇಲ್ಮಣ್ಣಿನ ನಾಶ, ಜಲಮೂಲ ನಾಶ, ಕಾಡು ಪ್ರಾಣಿಗಳಿಗೆ ಆಹಾರ ಸಿಗುತ್ತಿಲ್ಲ. ಗ್ರಾಮ ಸಾಮೂಹಿಕ ಭೂಮಿ ನಾಶ ಇತ್ಯಾದಿ ಗಂಭೀರ ದುಷ್ಪರಿಣಾಮಗಳು ಕಂಡು ಬಂದಿವೆ. ಜಲಾಶಯಗಳು ಹೂಳಿನಿಂದ ತುಂಬುತ್ತಿವೆ. ಕಾಡುಗಳು ಛಿದ್ರವಾಗಿವೆ. ಎಂದು ಭಾರತೀಯ ವಿಜ್ಞಾನ ಸಂಸ್ಥೆ ವರದಿ ನೀಡಿದೆ.

"ಭಾರತೀಯ ವಿಜ್ಞಾನ್ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರ ಶಿವಮೊಗ್ಗ ಅರಣ್ಯ ಪರಿಸ್ಥಿತಿ ವರದಿಯಲ್ಲಿ ಏಕಜಾತಿ ನೆಡುತೋಪು ಮಲೆನಾಡಿಗೆ ಸಾಧುಅಲ್ಲ" ಎಂದು ಅಭಿಪ್ರಾಯ ನೀಡಿದೆ.
ಒಂದೇ ಜಾತಿಯ ಸಸ್ಯದ ನೆಡುತೋಪುಗಳನ್ನು ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆಯುವುದರಿಂದ ಮಲೆನಾಡಿನ ನೆಲ-ಜಲ-ಕಾಡಿನ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂದು ತಜ್ಞರು ಅಭಿಪ್ರಾಯ ನೀಡಿದ್ದಾರೆ. ಮಣ್ಣಿನ ಸಾರ ನಷ್ಟ, ಅಂತರ್‌ಜಲ ಕುಸಿತ, ಹುಲ್ಲು, ಗಿಡಮೂಲಿಕೆ, ಪಶು, ಪಕ್ಷಿ, ಕೀಟ, ಪಕ್ಷಿ

ವೈವಿಧ್ಯತೆ ನಾಶವಾಗುವುದು, ಜಲಮೂಲ ಬತ್ತುವುದು, ವಾತಾವರಣ ತಾಪಮಾನ ಏರಿಕೆ ಈ ಅಪಾಯಗಳ ಬಗ್ಗೆ ಅಧ್ಯಯನ ವರದಿಗಳು ಎಚ್ಚರಿಸಿವೆ. ಹಲವು ಅರಣ್ಯ–ಪರಿಸರ ವಿಜ್ಞಾನಿಗಳು ಮಲೆನಾಡು ಪ್ರದೇಶದಲ್ಲಿ ಸ್ಥಳೀಯ ಜಾತಿಯ ವಿವಿಧ ಹಣ್ಣಿನ, ಕಾಡಿನ ಜಾತಿಯ ಗಿಡ ಬೆಳೆಸಲು ಸಲಹೆ ನೀಡಿದ್ದಾರೆ.

**ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮೈಸೂರು ಕಾಗದ ಕಾರ್ಖಾನೆಗೆ ನೆಡುತೋಪು ಬೆಳೆಸಲು ಭೂಮಿ ಗುತ್ತಿಗೆ ನವೀಕರಣ ಮಾಡುತ್ತಿರುವ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕು ಎಂದು ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಮನವಿ ಮಾಡಿದ್ದಾರೆ.**

**ಮಲೆನಾಡಿನ ಸಾಗರ, ಹೊಸನಗರ ತೀರ್ಥಹಳ್ಳಿ, ಸೊರಬ ಪ್ರದೇಶದಲ್ಲಿ ನೀಲಗಿರಿ, ಅಕೇಶಿಯಾ, ಮ್ಯಾಂಜಿಯಂ ಇತ್ಯಾದಿ ಏಕಸಸ್ಯ ನೆಡುತೋಪಿಗೆ ಅವಕಾಶ ನೀಡಬಾರದು. ಇದಕ್ಕೆ ಬದಲಾಗಿ ಮಲೆನಾಡಿನಲ್ಲಿ ಮಹಾಗನಿ, ಹೆಬ್ಬೇವು, ಬಿದಿರು, ಕದಂಬ, ಚಂದಕಲು ಮುಂತಾದ ಸ್ಥಳೀಯ ಜಾತಿಯ ಗಿಡಗಳನ್ನು ನೆಡುತೋಪುಗಳಲ್ಲಿ ಬೆಳೆಸಬೇಕು ಎಂದು ಅನಂತ ಹೆಗಡೆ ಅಶೀಸರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.**

ಈ ಬಗ್ಗೆ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು, ಶಿವಮೊಗ್ಗ ಲೋಕಾಸಭಾ ಸದಸ್ಯರು, ತೀರ್ಥಹಳ್ಳಿ, ಸಾಗರ, ಸೊರಬಾದ ವಿಧಾನ ಸಭಾ ಸದಸ್ಯರು, ಹಾಗೂ ಶಿವಮೊಗ್ಗ ಜಿಲ್ಲಾಧಿಕಾರಿಗಳ ಗಮನ ಸೆಳೆದಿದ್ದಾರೆ.

## SHARWANI.T.GOWDA selected to represent state in National Youth Parliament 2021 at parliament hall

Bangalore: SharwaniT.Gowda, 19 year student of M.S.Ramayya College of Law , Bengaluru got selected to represent Karnataka in Indian parliament; where its central Hall, hosts the special National Youth parliament session on 12th of January 2021, to mark the National Youth day;which also denotes the birth anniversary of the National Youth icon of India Swamy Vivekananda.

Hon'ble Prime Minister sri. NarendraModi is expected to take part in the session after his inaugural address of it.

Sharwani T. Gowda being kept her supremacy inBangalore district level& Karnataka state level contests concluded on 5th of January 2021 at KLE college of Pharmacy hall,Rajajinagar,Banglore; which was inaugurated by Dr. Shalini Rajneesh. IAS Adl. Chief secretary on the day.

Shri. Achal P Mayya of Madikeri district &sri. ChinnappaAngadi of Gadag district were also selected and airlifted to Delhi by the Ministry of Youth affairs to witness the firstof its kind event in the parliament hall.

The bestthree performers of the National Youth parliament event on National youth day will be honoured with National Youth Day awards & cash prizes worth 2 lakhs, 1.5 lakhs, & 1. Lakh respectively.

The whole exercise is being monitored from the district to National level by the Nehru Yuva Kendra Sangathan & National service Scheme together all .

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## Date :7.1.2021

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 45 | Good | $NO_2$ |
| 2 | Jayanagar 5th Block, Shalini ground | 47 | Good | $O_3$ |
| 3 | KAVIKA, Mysore Road | * | * | * |
| 4 | Rajeev Gandhi Institute of Chest Disease, NIMHANS, Hombegowda Nagar | 24 | Good | $O_3$ |
| 5 | HSR Layout, near Central Silkboard | 52 | Satisfactory | $O_3$ |
| 6 | City Railway Station, Magestic, Bengaluru | 45 | Good | $PM_{10}$ |

| | | | | |
|---|---|---|---|---|
| 7 | Saneguruvanahalli, NisargaBhavan, KSPCB, Shivanagara | 36 | Good | $PM_{10}$ |
| 8 | BWSSB, Kadabesanahalli | 22 | Good | $NO_2$ |
| 9 | Peenya | 36 | Good | $O_3$ |
| 10 | BTM Layout | * | * | * |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

**ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 7.1.2021**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 45 | ಉತ್ತಮ | $NO_2$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 47 | ಉತ್ತಮ | $O_3$ |

| | | | | |
|---|---|---|---|---|
| 3 | ಕವಿಕ, ಮೈಸೂರುರಸ್ತೆ | * | * | * |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 24 | ಉತ್ತಮ | $O_3$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರಗ್ರೇಪ್ ಮಂಡಳಿ ಹತ್ತಿರ | 52 | ತೃಪ್ತಿಕರ | $O_3$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 45 | ಉತ್ತಮ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 36 | ಉತ್ತಮ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 22 | ಉತ್ತಮ | $NO_2$ |
| 9 | ಪೀಣ್ಯ | 36 | ಉತ್ತಮ | $O_3$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |